# ರಾಜ್ಯ ನಗರಾಭಿವೃದ್ಧಿ ಸಂಸ್ಥೆ

ಆಡಳಿತ ತರಬೇತಿ ಸಂಸ್ಥೆ ಆವರಣ ಲಲಿತ ಮಹಲ್ ರಸ್ತೆ, ಮೈಸೂರು–570 011

**Phone No: 0821-2520116 Fax No;0821-2520164**

**e-mail:directorsiud@yahoo.co.in, website: www.siudmysore.gov.in**


ಸಂಖ್ಯೆ:ರಾನಸಂ/ಸಿಬ್ಬಂದಿ/ವಿವ–29/2015–16 ದಿನಾಂಕ : 18.11.2015

## ಸಂಸ್ಥೆಯ ವಸತಿ ನಿಲಯಕ್ಕೆ ಹೌಸ್ ಕೀಪಿಂಗ್ ಹಾಗೂ ತೋಟಗಾರಿಕೆ ನಿರ್ವಹಣೆಗಾಗಿ ಸಿಬ್ಬಂದಿಗಳ ಸೇವೆಗಳನ್ನು ಪಡೆಯುವ ಸಲುವಾಗಿ ಟೆಂಡರ್‌ದಾರರ ಪ್ರಿ–ಬಿಡ್ ಸಭೆಯ ಸಭಾ ನಡವಳಿ

**ದಿನಾಂಕ:** 07.11.2015, **ಸಮಯ:** 04:30

**ಸ್ಥಳ:** ಕಮಿಟಿ ಹಾಲ್, ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು

**ಪ್ರಿ ಬಿಡ್ ಸಭೆಯಲ್ಲಿ ಹಾಜರಿದ್ದವರ ವಿವರ**

1. ನಿರ್ದೇಶಕರು, ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು — ಅಧ್ಯಕ್ಷರು
2. ಉಪ ನಿರ್ದೇಶಕರು, ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು — ಸದಸ್ಯರು
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು — ಸದಸ್ಯರು
4. ಪರಿಪಾಲಕರು, ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು — ಸಂಚಾಲಕರು

**ಪ್ರಿ ಬಿಡ್ ಸಭೆಯಲ್ಲಿ ಹಾಜರಿದ್ದ ಟೆಂಡರ್‌ದಾರರು**

1. ಮೇ॥ ಕಾಂತಿ ಏಜೆನ್ಸಿ ನೆಟ್‌ವರ್ಕ್, ಮೈಸೂರು,
2. M/S South (India) Pest Control Private limited, Mysore
3. M/S Panorama Enterprises, Bangalore.

**ಸಭೆಯಲ್ಲಿ ಹಾಜರಿದ್ದ ಟೆಂಡರ್‌ದಾರರ ಜೊತೆ ಚರ್ಚಿಸಿ ನಂತರ ಈ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ.**

- ನಿರ್ದೇಶಕರು ಟೆಂಡರ್‌ದಾರರ ಕುರಿತು ಟೆಂಡರ್ ಬಗ್ಗೆ ಮಾಹಿತಿ ನೀಡಿದರು.
- ಟೆಂಡರ್ ಚೆಕ್ ಲಿಸ್ಟ್‌ನ ವಿವರಗಳನ್ನು ಓದಿದರು.
- ಟೆಂಡರ್ ಚೆಕ್ ಲಿಸ್ಟ್‌ನ ಕ್ರಮ ಸಂಖ್ಯೆ 02 ಮತ್ತು 09 ವಿಷಯಗಳು ಒಂದೇ ಅಂಶವನ್ನು ಬಿಂಬಿಸುತ್ತಿದೆ ಎಂಬ ಅಭಿಪ್ರಾಯ ಟೆಂಡರ್‌ದಾರರಿಂದ ವ್ಯಕ್ತವಾಯಿತು. ಆದ್ದರಿಂದ ಚೆಕ್ ಲಿಸ್ಟ್ ಕ್ರಮ ಸಂಖ್ಯೆ 02 ಮತ್ತು 09 ರಲ್ಲಿ ಚೆಕ್ ಲಿಸ್ಟ್‌ನ ಕ್ರಮ ಸಂಖ್ಯೆ 02 ನ್ನು ಉಳಿಸಿಕೊಳ್ಳುವುದಾಗಿ ತೀರ್ಮಾನಿಸಲಾಯಿತು.
- ಟೆಂಡರ್‌ದಾರರೊಂದಿಗೆ ಚರ್ಚಿಸಲಾಗಿ ಸೇವಾ ತೆರಿಗೆಯನ್ನು ಸೇವಾ ಗುಣಮಟ್ಟವನ್ನು ಕಾಯ್ದುಕೊಳ್ಳುವ ಸಲುವಾಗಿ ಕನಿಷ್ಠ 2% ನಿಗದಿಪಡಿಸಲು ತೀರ್ಮಾನಿಸಲಾಯಿತು.
- ಮುಂದುವರಿದು ಗಾರ್ಡನ್ ನಿರ್ವಹಣೆಯ ಬಗ್ಗೆ ಬಿಡ್‌ದಾರರು ಗಾರ್ಡನ್ ಸಾಮಾಗ್ರಿಗಳನ್ನು ನೀಡುವ ಬಗ್ಗೆ ಚರ್ಚಿಸಿದಾಗ ಗಾರ್ಡನ್ ನಿರ್ವಹಣೆಗೆ ಬೇಕಾಗುವ ದೊಡ್ಡ ಮಿಷಿನರಿಗಳನ್ನು ಸಂಸ್ಥೆಯು ನೀಡುವುದಾಗಿ ಹಾಗೂ ಸಣ್ಣ ಪುಟ್ಟ ಸಾಮಾಗ್ರಿಗಳನ್ನು ಟೆಂಡರ್‌ದಾರರೇ ಖರೀದಿಸಿಕೊಳ್ಳಬೇಕು ಎಂದು ತಿಳಿಸಿದರು. ಈ ವಿಷಯವನ್ನು ಬಿಡ್‌ದಾರರು ಒಪ್ಪಿದರು.
- ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಇನ್ನಾವುದಾದರೂ ನ್ಯೂನ್ಯತೆ ಅಥವಾ ಸಮಸ್ಯೆಗಳ ಬಗ್ಗೆ ವಿಚಾರಿಸಿದಾಗ ಬಿಡ್‌ದಾರರಿಂದ ಯಾವುದೂ ಇಲ್ಲ ಎಂಬುದನ್ನು ಪರಿಗಣಿಸಿ ಎಲ್ಲರಿಗೂ ವಂದನೆ ಸಲ್ಲಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನಿರ್ದೇಶಕರು